ಇತ್ಯರ್ಥವಾದ ನಂತರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಅನಧಿಕೃತ ಕಟ್ಟಡಗಳನ್ನು ಕೆಡವಲು ಸಹ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಿಷಯ: ಮಂತ್ರಿಗಳ ವಿದೇಶ ಪ್ರವಾಸ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1618 (11261)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 6 ತಿಂಗಳಿಂದ ಹೊರ ದೇಶಗಳಿಗೆ ಹೋಗಿರುವ ಮಂತ್ರಿಗಳೆಷ್ಟು ಹಾಗೂ ಅವರುಗಳಾರು. (ಅವರ ಹೆಸರು, ಪೂರ್ಣ ವಿವರ ಒದಗಿಸುವುದು)

ಆ) ಹಾಗಿದ್ದಲ್ಲಿ, ಯಾವ ಯಾವ ಉದ್ದೇಶಕ್ಕೆ ಹೊರದೇಶಕ್ಕೆ ಹೋಗಿದ್ದರು?

ಇ) ಸದರಿ ಭೇಟಿಗಳಿಗೆ ತಗಲಿರುವ ವೆಚ್ಚವೆಷ್ಟು? ಪ್ರತ್ಯೇಕ ವಿವರ ಒದಗಿಸುವುದು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಮತ್ತು ಶ್ರೀ ಆರ್.ವಿ.ದೇಶಪಾಂಡೆ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಸ್ವಿಟ್ಜರ್‌ಲ್ಯಾಂಡ್‌ನ ಧಾವೋಸ್ ದಿನಾಂಕ:28-1-1995 ಭಾಗವಹಿಸಿದ್ದರು ಹಾಗೂ ಇಸ್ರೇಲ್ ದೇಶವು ಅನುಸರಿಸುತ್ತಿರುವ ಆಧುನಿಕ ವ್ಯವಸಾಯ ಪದ್ಧತಿಗಳನ್ನು ಅಧ್ಯಯಿಸಲು ಟೆಲ್ ಅವೀವ್‌ಗೆ ದಿನಾಂಕ 30-1-95 ರಿಂದ 6-2-95ರವರೆಗೆ ಭೇಟಿ ನೀಡಿದ್ದರು. ಇದಕ್ಕಾದ ವೆಚ್ಚ ಮುಖ್ಯಮಂತ್ರಿಗಳು : ರೂ. 1,05,000-00, ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ರೂ. 93,666-00

2. ಶ್ರೀ ಜೆ.ಹೆಚ್.ಪಟೇಲ್, ಉಪ ಮುಖ್ಯಮಂತ್ರಿಗಳು 'ಇನ್‌ವೆಸ್ಟ್‌ಮೆಂಟ್ ಆಪರ್‌ಚ್ಯುನಿಟೀಸ್ ಇನ್ ಟೂರಿಸಂ ಇನ್ ಕರ್ನಾಟಕ ಅಂಡ್ ಪ್ರಮೋಷನ್ ಆಫ್ ಟೂರಿಸಂ ವಿತ್ ಸಿಂಗಪೂರ್ ಅಂಡ್ ಮಲೇಶಿಯಾ ಎಂಬ ವಿಷಯದ ಮೇಲೆ ನಡೆದ ಕಾರ್ಯಾಗಾರದಲ್ಲಿ ಭಾಗವಹಿಸಲು ದಿನಾಂಕ: 14-2-1995ರಿಂದ 21-2-1995ರವರೆಗೆ ಸಿಂಗಾಪುರ್ ಮತ್ತು ಮಲೇಷಿಯಾಗಳಿಗೆ ಭೇಟಿ ನೀಡಿದ್ದರು. ಇದಕ್ಕಾದ ವೆಚ್ಚ ರೂ. 33,040-00

3. ಶ್ರೀ ಜೆ.ಹೆಚ್.ಪಟೇಲ್ ಉಪಮುಖ್ಯಮಂತ್ರಿಗಳು ಮತ್ತು ಶ್ರೀ ಆರ್.ವಿ.ದೇಶಪಾಂಡೆ, ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಿನಾಂಕ 29-4-95ರಿಂದ 3-5-95ರವರೆಗೆ ದುಬೈನಲ್ಲಿ ನಡೆದ 'ಕರ್ನಾಟಕದಲ್ಲಿ ಕೈಗಾರಿಕಾಭಿವೃದ್ಧಿ' ಎಂಬ ಸಮ್ಮೇಳನದಲ್ಲಿ ಭಾಗವಹಿಸಲು ದುಬೈಗೆ ಭೇಟಿ ನೀಡಿದ್ದರು. ಇದಕ್ಕಾದ ವೆಚ್ಚ : ಉಪಮುಖ್ಯಮಂತ್ರಿಗಳು: ರೂ. 21,391-00

4. ಶ್ರೀ ಎಸ್.ಡಿ.ಜಯರಾಂ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಇಟಲಿ ಮತ್ತು ಜರ್ಮನಿಯಲ್ಲಿ ನಡೆದ 'ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ ಇಕ್ಸಿಬಿಷನ್ಸ್ ಆನ್ ನ್ಯಾಚುರಲ್

ಸ್ಟೋನ್ ಅಂಡ್ ಸ್ಟೋನ್ ಪ್ರೊಸೆಸಿಂಗ್ ಟೆಕ್ನಾಲಜಿ'ಯಲ್ಲಿ ಭಾಗವಹಿಸಲು ಹಾಗೂ ಇಂಗ್ಲೆಂಡಿನ ವ್ಯಾಪಾರೋದ್ಯಮಿಗಳನ್ನು ಭೇಟಿ ಮಾಡಲು ದಿನಾಂಕ 15-5-1995ರಿಂದ 28-5-1995ರವರೆಗೆ ಇಟಲಿ, ಜರ್ಮನಿ ಮತ್ತು ಇಂಗ್ಲೆಂಡಿಗೆ ಪ್ರವಾಸ ಮಾಡಿದ್ದರು. ಇದಕ್ಕಾದ ವೆಚ್ಚ ರೂ.89,000-00

5. ಶ್ರೀ ಸಿ. ಬೈರೇಗೌಡ, ಕೃಷಿ ಸಚಿವರು ಹಾಗೂ ಶ್ರೀ ಡಿ.ಟಿ. ಜಯಕುಮಾರ್ ತೋಟಗಾರಿಕೆ ರಾಜ್ಯ ಸಚಿವರು, ಇಸ್ರೇಲ್ ದೇಶವು ಕೃಷಿ, ಪುಷ್ಪ ಕೃಷಿ ಹಾಗೂ ನೀರಾವರಿ ಬಗ್ಗೆ ಮಾಡಿರುವ ಪ್ರಗತಿಯನ್ನು ಅಧ್ಯಯಿಸಲು ದಿನಾಂಕ 16-7-95ರಿಂದ 23-7-95ರವರೆಗೆ ಸದರಿ ದೇಶಕ್ಕೆ ಭೇಟಿ ನೀಡಿದ್ದರು.

6.ಶ್ರೀ ಹಚ್.ಡಿ.ದೇವೇಗೌಡ, ಮುಖ್ಯಮಂತ್ರಿಗಳು, ಶ್ರೀ ಆರ್.ಟಿ.ದೇಶಪಾಂಡೆ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ಶ್ರೀ ರೋಶನ್ ಬೇಗ್, ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಸಿಂಗಾಪುರ ಸರ್ಕಾರದೊಂದಿಗೆ ವ್ಯಾಪಾರ ಮತ್ತು ಬಂಡವಾಳ ಹೂಡಿಕೆಯ ಬಗ್ಗೆ ದ್ವಿಪಕ್ಷೀಯ ಮಾತುಕತೆಗಾಗಿ ದಿನಾಂಕ 24-7-1995ರಿಂದ 26-7-1995ರವರೆಗೆ ಸಿಂಗಾಪುರಕ್ಕೆ ಭೇಟಿ ನೀಡಿದ್ದರು. ಇದಕ್ಕಾದ ವೆಚ್ಚ: ಮುಖ್ಯಮಂತ್ರಿಗಳು: ರೂ.37245-00,ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು: ರೂ. 31,210-00, ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು: ರೂ. 30,385-00

ವಿಷಯ: ನಗರದಲ್ಲಿ ಲೈವ್ ಬ್ಯಾಂಡ್ ನಡೆಸಲು ಅನುಮತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1619 (1501)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮತ್ತೆ ಲೈವ್ ಬ್ಯಾಂಡ್‌ಗೆ ಅನುಮತಿ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಆ) ಲೈವ್‌ಬ್ಯಾಂಡ್‌ಗೆ ಅನುಮತಿ ನೀಡಿದಲ್ಲಿ ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವುದಿಲ್ಲವೇ?

ಇ) ಲೈವ್ ಬ್ಯಾಂಡ್‌ನ ಕಲಾವಿದರುಗಳಿಗೆ ಲೈವ್ ಬ್ಯಾಂಡ್‌ನ ಬದಲಾಗಿ ಬೇರೆ ಉದ್ಯೋಗ ಅವಕಾಶವನ್ನು ಅಥವಾ ಕೈಗಾರಿಕೆಯನ್ನು ಸ್ಥಾಪಿಸಲು ಆರ್ಥಿಕ ನೆರವನ್ನು ಸರ್ಕಾರ ನೀಡಲು ಉದ್ದೇಶಿಸಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):-

ಅ) ಈ ವಿಷಯ ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಪರಿಶೀಲನೆಯಲ್ಲಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಲೈವ್ ಬ್ಯಾಂಡ್‌ನ್ನು ಒಳಾಡಳಿತ ಇಲಾಖೆಯು ನಿಷೇಧಿಸಿಲ್ಲ. ಅಬಕಾರಿ ಕಾನೂನಿಗೆ ಇದು ಬಾಹಿರವಾದದ್ದರಿಂದ ನಿಷೇಧಕ್ಕೆ ಒಳಗಾಗಿದೆ. ಇದರಿಂದಾಗಿ ಉದ್ಯೋಗ ಅವಕಾಶ ಅಥವಾ ಕೈಗಾರಿಕೆಯನ್ನು ಸ್ಥಾಪಿಸಲು ಆರ್ಥಿಕ ನೆರವನ್ನು ನೀಡುವ ಪ್ರಶ್ನೆಯೂ ಸಹ ಒಳಾಡಳಿತ ಇಲಾಖೆಗೆ ಸಂಬಂಧಿಸುವುದಿಲ್ಲ.